60

(126)

ಕರ್ನಾಟಕ ಸರ್ಕಾರ

ಸಂಖ್ಯೆ: ಲೋಇ 60 ಸಿಆರ್‌ಎಂ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:08.11.2021

## ಸುತ್ತೋಲೆ

ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಇಲ್ಲಿ ರಿಟ್‌ಪಿಟಿಷನ್ ಸಂಖ್ಯೆ:103060/2021, ದಿನಾಂಕ:15.09.2021 ರಂದು ಅಡಿಯಲ್ಲಿ ನೀಡಿರುವ ಆದೇಶದ ಮೇರೆಗೆ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ಸಂಪರ್ಕ ಮತ್ತು ಕಟ್ಟಡಗಳ ವಲಯಗಳು ಹಾಗೂ PRAMC ಕಛೇರಿಗಳ ವ್ಯಾಪ್ತಿಯಲ್ಲಿ ಟೆಂಡರ್ ದಾಖಲಾತಿಗಳಲ್ಲಿ ವಿಧಿಸಲಾಗುತ್ತಿರುವ ನಿಬಂಧನೆಗಳನ್ನು ಪರಿಶೀಲಿಸಿದ್ದು ಏಕರೂಪತೆಯಿಂದ ಇರದೆ ಬೇರೆ ಬೇರೆ ರೀತಿಯಿಂದ ಇರುವುದನ್ನು ಗಮನಿಸಲಾಗಿರುತ್ತದೆ. ಆದ್ದರಿಂದ ಹಾಗೂ ಸರ್ಕಾರದ ಮಟ್ಟದಲ್ಲಿ ಸ್ವೀಕೃತಗೊಳ್ಳುತ್ತಿರುವ ಟೆಂಡರ್ ಅಪೀಲುಗಳಲ್ಲಿನ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಕೆಡಬ್ಲ್ಯೂ ದಾಖಲಾತಿಗಳಲ್ಲಿ ನಿಬಂಧನೆಗಳನ್ನು ವಿಧಿಸುವಾಗ ಹಾಗೂ ಟೆಂಡರ್ ಪರಿಶೀಲನೆಯನ್ನು ಕೈಗೊಳ್ಳುವಾಗ ಈ ಕೆಳಕಂಡ ಕ್ರಮಗಳನ್ನು ಅನುಸರಿಸುವಂತೆ ಸೂಚಿಸಲಾಗಿದೆ.

1. **Financial turnover ನಿಗಧಿಪಡಿಸುವ ಬಗ್ಗೆ:**

ಅ. ಸರ್ಕಾರದ ಆದೇಶ ಸಂಖ್ಯೆ FD 4 PCL 2008, dated: 14.10.2008 ರ ಪ್ರಕಾರ ರೂ.100.00 ಲಕ್ಷಗಳು ಮೊತ್ತದವರೆಗಿನ ಕಾಮಗಾರಿಗಳಿಗೆ "To qualify for award of this contract each tenderer in his name should have in the last five years period (a) achieved in at least two financial years an average annual financial turnover of Rs....... (usually not less than the estimated cost under this contract for works costing upto Rs.100 lakh)" ಎಂದಿರುತ್ತದೆ. ಅದರಂತೆ ರೂ.100.00 ಲಕ್ಷಗಳು ಮೊತ್ತದವರೆಗಿನ ಕಾಮಗಾರಿಗಳಿಗೆ, ಕಾಮಗಾರಿಯ ಮೊತ್ತವನ್ನೇ turnover ಮೊತ್ತವನ್ನಾಗಿ ನಿಗಧಿಪಡಿಸತಕ್ಕದ್ದು.

ಆ. ಸರ್ಕಾರದ ಆದೇಶ ಸಂಖ್ಯೆ FD 4 PCL 2008, dated: 14.10.2008 ರ ಪ್ರಕಾರ ರೂ.100.00 ಲಕ್ಷಗಳು ಮೊತ್ತವನ್ನು ಮೀರಿದ ಕಾಮಗಾರಿಗಳಿಗೆ "To qualify for award of this contract each tenderer in his name should have in the last five years period (a) achieved in at least two financial years a Minimum financial turn over (in all classes of civil engineering construction works only) of Rs.____ (usually not less than two times the estimated annual payments under this contract)" ಎಂದಿರುತ್ತದೆ.

ಅದರಂತೆ ರೂ.100.00 ಲಕ್ಷಗಳ ಮೊತ್ತ ಮೀರಿದ ಕಾಮಗಾರಿಗಳಿಗೆ, ಕಾಮಗಾರಿ ಪೂರ್ಣಗೊಳ್ಳಲು ನಿಗಧಿಪಡಿಸುವ ಅವಧಿಯು 12 ತಿಂಗಳುಗಳನ್ನು ಮೀರಿದಲ್ಲಿ ಒಟ್ಟಾರೆ ಅವಧಿಯ ಆಧಾರದ ಮೇಲೆ 12 ತಿಂಗಳಿನಲ್ಲಿ ಪಾವತಿ ಮಾಡಬಹುದಾದ ಮೊತ್ತವನ್ನು ಲೆಕ್ಕಾಚಾರ ಮಾಡಿ ಅದರ ಎರಡರಷ್ಟು ಮೊತ್ತವನ್ನು turnover ಮೊತ್ತವನ್ನಾಗಿ ನಿಗಧಿಪಡಿಸತಕ್ಕದ್ದು.

ಕಾಮಗಾರಿ ಪೂರ್ಣಗೊಳ್ಳಲು ನಿಗಧಿಪಡಿಸುವ ಅವಧಿಯು 12 ತಿಂಗಳುಗಳನ್ನು ಮೀರದೆ ಕಡಿಮೆ ಅವಧಿ ಇದ್ದಂತಹ ಸಂದರ್ಭದಲ್ಲಿ ಕಾಮಗಾರಿಯ ಮೊತ್ತವೇ ವಾರ್ಷಿಕವಾಗಿ ಪಾವತಿ ಮಾಡುವ ಮೊತ್ತವಾಗಲಿದ್ದು, ಈ ಮೊತ್ತದ ಎರಡರಷ್ಟು ಮೊತ್ತವನ್ನು turnover ಮೊತ್ತವನ್ನಾಗಿ ನಿಗಧಿಪಡಿಸತಕ್ಕದ್ದು.

2. ಇಲಾಖೆಯಲ್ಲಿ ಟೆಂಡರ್ ಆಹ್ವಾನಿಸುವಾಗ ಕೆಡಬ್ಲ್ಯೂ-3 ಮತ್ತು ಕೆಡಬ್ಲ್ಯೂ-4 ದಾಖಲಾತಿಗಳ ಕಂಡಿಕೆ 3.2(C)ರಡಿಯಲ್ಲಿ ಗುತ್ತಿಗೆದಾರರು ನಿರ್ವಹಿಸಬೇಕಾಗಿರುವ ಪ್ರೈಮ್ ಐಟಂಗಳನ್ನು ನಿಗಧಿಪಡಿಸಲಾಗುತ್ತಿದೆ. ಹೀಗೆ ನಿಗಧಿಪಡಿಸುವಾಗ ಒಂದೇ ರೀತಿಯ (similar) ಐಟಂಗಳನ್ನು ನಿರ್ವಹಿಸಿರುವ ಬಗ್ಗೆ ಸೂಕ್ತವಾಗಿ ಅಳವಡಿಸದೆ ಇರುವ ಕಾರಣ ಸರ್ಕಾರದಲ್ಲಿ ಅಪೀಲುಗಳು ಸ್ವೀಕೃತವಾಗುತ್ತಿದೆ. (ಉದಾಹರಣೆಗೆ: ಟೆಂಡರ್ ಆಹ್ವಾನಿಸುವ ಕಾಮಗಾರಿಯ ಅಂದಾಜಿನಲ್ಲಿ ಸಿಮೆಂಟ್ ಕಾಂಕ್ರೀಟ್ ಬ್ಲಾಕ್ ನಿರ್ಮಾಣಕ್ಕೆ ಅವಕಾಶವಿದ್ದಲ್ಲಿ ಟೆಂಡರ್ ದಾಖಲಾತಿಯಲ್ಲಿ ಸಿಮೆಂಟ್ ಕಾಂಕ್ರೀಟ್ ಬ್ಲಾಕ್ ಪರಿಮಾಣ ನಿರ್ವಹಿಸಿರಬೇಕು ಎಂದು ನಿಗಧಿಪಡಿಸಲಾಗುತ್ತಿದೆ. ಗುತ್ತಿಗೆದಾರರು ಇಟ್ಟಿಗೆ ಕಟ್ಟಡದ ಪರಿಮಾಣ ನಿರ್ವಹಿಸಿರುವ ದಾಖಲೆಗಳನ್ನು ಸಲ್ಲಿಸಿದ್ದಲ್ಲಿ ಅದನ್ನು ಟೆಂಡರ್ ಇವಾಲ್ಯೂಯೇಷನ್ ಮಾಡುವಾಗ ಪರಿಗಣಿಸುತ್ತಿಲ್ಲ.) ಈ ಹಿನ್ನೆಲೆಯಲ್ಲಿ ಈ ಸಂಬಂಧ ಈಗಾಗಲೇ ಸರ್ಕಾರದ ಸುತ್ತೋಲೆ ಸಂಖ್ಯೆ: ಲೋಇ 630 ಸಿಆರ್‌ಎಂ 2014 ದಿನಾಂಕ:17.11.2014ರಲ್ಲಿ ಟೆಂಡರ್ ದಾಖಲಾತಿಗಳಲ್ಲಿ - ಐಟಂಗಳನ್ನು ನಿಗಧಿಪಡಿಸುವಾಗ ಅನುಸರಿಸಬೇಕಾದ ಕ್ರಮದ ಬಗ್ಗೆ ಕ್ರ.ಸಂ. 1 ರಿಂದ 5 ರಲ್ಲಿ ಮಾರ್ಗಸೂಚಿಗಳನ್ನು ನೀಡಲಾಗಿದ್ದು ಅದನ್ನು ಅನುಸರಿಸತಕ್ಕದ್ದು.

3. ಸರ್ಕಾರದ ಆದೇಶ ಸಂಖ್ಯೆ FD 4 PCL 2008, dated:14.10.2008 ರ ಕ್ರಸಂ.7 ರಲ್ಲಿ ತಿಳಿಸಿರುವಂತೆ ಕೆಡಬ್ಲ್ಯೂ-3 ಮತ್ತು ಕೆಡಬ್ಲ್ಯೂ-4 ದಾಖಲಾತಿಗಳ ಕಂಡಿಕೆ 3.3 (a) ರಡಿಯಲ್ಲಿ ಕಾಮಗಾರಿಗೆ ಅವಶ್ಯವಿರುವ key and critical equipments ಗಳಲ್ಲಿ ಶೇಕಡಾ 50 ರಷ್ಟು ಸ್ವಂತ ಹೊಂದಿರಬೇಕಾದ equipments ಹಾಗೂ ಶೇಕಡಾ 50 ರಷ್ಟನ್ನು ಬಾಡಿಗೆ ಅಥವಾ ಲೀಸ್ ಆಧಾರದ ಮೇಲೆ ಹೊಂದಿರಬೇಕಾದ equipments ಗಳ ವಿವರಗಳನ್ನು ನಮೂದಿಸಲಾಗುತ್ತಿದೆ. ಈ ಸಂಬಂಧ ರಸ್ತೆ, ಸೇತುವೆ ಹಾಗೂ ಕಟ್ಟಡ ಕಾಮಗಾರಿಗಳ ಸುಸೂತ್ರ ನಿರ್ವಹಣೆಗೆ ಪ್ರಮುಖವಾಗಿ ಅವಶ್ಯವಿರುವ equipments ಗಳನ್ನು ಗುತ್ತಿಗೆದಾರರು ಸ್ವಂತವಾಗಿ ಹೊಂದಿರಬೇಕಾದ ನಿಬಂಧನೆಯಡಿಯಲ್ಲಿ ನಮೂದಿಸತಕ್ಕದ್ದು. ಬಾಡಿಗೆ ಆಧಾರದ ಮೇಲೆ ಲಭ್ಯವಾಗುವಂತಹ ಸಾಮಾನ್ಯ equipments ಗಳನ್ನು ಬಾಡಿಗೆ ಅಥವಾ ಲೀಸ್ ಆಧಾರದಂತೆ ನಮೂದಿಸತಕ್ಕದ್ದು. ಈ ಸಂಬಂಧ ಕೆಳಕಂಡಂತೆ ಸ್ಪಷ್ಟೀಕರಣ ನೀಡಲಾಗಿದೆ.

...3

**<u>ಗುತ್ತಿಗೆದಾರರು ಕನಿಷ್ಠವಾಗಿ ಸ್ವಂತವಾಗಿ ಹೊಂದಿರಲೇಬೇಕಾದ key and critical equipments:</u>**

<u>ರಸ್ತೆ ಕಾಮಗಾರಿಗಳು:</u>

1. Hot Mix Plant / Batch Mix Plant (minimum capacity of 40/60 TPH) - 1 No
2. Static Road Roller – 1 No.
3. Vibratory Road Roller – 1 No.
4. Mechanical Paver finisher – 1 No
5. Tippers – 50% as per the requirement (not less than two)

<u>ಕಟ್ಟಡ ಕಾಮಗಾರಿಗಳು:</u>

1. Concrete Batch Mix Plant / Rotavator of suitable specification – 1 No.
2. Transit mixers - 1 No.
3. Tippers – 50% as per the requirement (not less than two)
4. Shuttering Materials – 50% of requirement

**ಗುತ್ತಿಗೆದಾರರು ಬಾಡಿಗೆ ಅಥವಾ ಲೀಸ್ ಆಧಾರದ ಮೇಲೆ ಹೊಂದಿರಬಹುದಾದ equipments:**

1. Excavator like JCB/Hitachi etc.,
2. Tippers – 50% as per the requirement (not less than two)
3. Shuttering Materials – 50% of requirement
4. Water tanker

ಇವುಗಳ ಜೊತೆಗೆ ಕಾಮಗಾರಿಯ ಗಾತ್ರಕ್ಕೆ ತಕ್ಕಂತೆ ಹೆಚ್ಚುವರಿ ಯಂತ್ರೋಪಕರಣಗಳ ಅಗತ್ಯ ಕಂಡುಬಂದಲ್ಲಿ ಹಾಗೂ ಶೆಡ್ಯೂಲ್ ಬಿ ಯಲ್ಲಿನ ಐಟಂಗಳನ್ನು ನಿರ್ವಹಿಸಲು ನಿರ್ಧಿಷ್ಟವಾದ ಯಂತ್ರೋಪಕರಣ ಬೇಕಾದಲ್ಲಿ ಅದನ್ನು ಸೂಕ್ತವಾಗಿ ಅಳವಡಿಸಿಕೊಳ್ಳತಕ್ಕದ್ದು.

5. ಕೆಡಬ್ಲ್ಯೂ-3 ಮತ್ತು ಕೆಡಬ್ಲ್ಯೂ-4 ದಾಖಲಾತಿಗಳ ಕಂಡಿಕೆ 3.2 (c) ರನ್ವಯ ನಿಗಧಿಪಡಿಸಲಾಗುವ ವಿವಿಧ ಪ್ರೈಮ್ ಐಟಂಗಳ ಪರಿಮಾಣಗಳನ್ನು ಕಳೆದ 5 ವರ್ಷಗಳಲ್ಲಿ ಯಾವುದಾದರೂ 1 ವರ್ಷದಲ್ಲಿ ನಿರ್ವಹಿಸಿರಬಹುದಾಗಿರುತ್ತದೆ. ಆದರೆ ಕೆಲವು ವಿಭಾಗಗಳ ವತಿಯಿಂದ ಟೆಂಡರುಗಳು ಸ್ವೀಕೃತಗೊಂಡ ನಂತರ ಇವಾಲ್ಯೂಯೇಷನ್ ಮಾಡುವಾಗ ಯಾವುದಾದರೂ ಒಂದು ಆರ್ಥಿಕ ವರ್ಷವನ್ನು ನಿಗಧಿಪಡಿಸಿಕೊಂಡು ಅದೇ ಆರ್ಥಿಕ ವರ್ಷದಲ್ಲಿ ನಿರ್ವಹಿಸಿರುವ ಎಲ್ಲಾ ಪ್ರೈಮ್ ಐಟಂಗಳ ಪರಿಮಾಣಗಳನ್ನು ಪರಿಗಣಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕಳೆದ 5 ವರ್ಷಗಳಲ್ಲಿ ಯಾವ ವರ್ಷದಲ್ಲಿ ಯಾವ ಪ್ರೈಮ್ ಐಟಂನ ಪರಿಮಾಣವು ಅಧಿಕವಿರುತ್ತದೆಯೋ ಆ ಪರಿಮಾಣವನ್ನು ಇವಾಲ್ಯೂಯೇಷನ್‌ಗೆ ಪರಿಗಣಿಸತಕ್ಕದ್ದು.

ಮೇಲಿನ ಮಾರ್ಗಸೂಚಿಗಳನ್ನು KW 3 ಹಾಗೂ 4 ರಲ್ಲಿ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ

..4

ಟೆಂಡರ್ ಕರೆಯುವ ವೇಳೆಯಲ್ಲಿ ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಅನುಷ್ಠಾನಾಧಿಕಾರಿಗಳಿಗೆ ಈ ಮೂಲಕ ನಿರ್ದೇಶನ ನೀಡಲಾಗಿದೆ.

(ಶಾಂತಕುಮಾರ್ ಕೆ.) 8/11/21
ಸರ್ಕಾರದ ಅಪರ ಕಾರ್ಯದರ್ಶಿ,
ಲೋಕೋಪಯೋಗಿ ಇಲಾಖೆ.

ಇವರಿಗೆ,

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, 3ನೇ ಮಹಡಿ, ಸಂಪರ್ಕ ಸೌಧ, ಓರಿಯನ್ ಮಹಲ್ ಎದುರು, ರಾಜಾಜಿನಗರ, ಬೆಂಗಳೂರು-10
2. ಯೋಜನಾ ನಿರ್ದೇಶಕರು, ಕರ್ನಾಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಕೆ.ಆರ್.ಸರ್ಕಲ್, ಬೆಂಗಳೂರು
3. ಮುಖ್ಯ ಯೋಜನಾಧಿಕಾರಿ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಕೆ.ಆರ್.ಸರ್ಕಲ್, ಬೆಂಗಳೂರು
4. ಪ್ರಧಾನ ಇಂಜಿನಿಯರ್, ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರ, ಕೆ.ಆರ್.ವೃತ್ತ, ಬೆಂಗಳೂರು
5. ಮುಖ್ಯ ಇಂಜಿನಿಯರ್, ಗುಣ ಭರವಸೆ ವಲಯ, ಬೆಂಗಳೂರು
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು
7. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ಉತ್ತರ), ಧಾರವಾಡ
8. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ಈಶಾನ್ಯ), ಕಲಬುರಗಿ
9. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ಕೇಂದ್ರ ವಲಯ), ಶಿವಮೊಗ್ಗ
10. ಮುಖ್ಯ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ, ಕೆ.ಆರ್.ಸರ್ಕಲ್, ಬೆಂಗಳೂರು
11. ಎಲ್ಲಾ ಅಧೀಕ್ಷಕ ಇಂಜಿನಿಯರ್ ಗಳಿಗೆ ಸಂಬಂಧಿಸಿದ ಮುಖ್ಯ ಇಂಜಿನಿಯರ್ ಗಳ ಮುಖಾಂತರ
12. ಎಲ್ಲಾ ಕಾರ್ಯಪಾಲಕ ಇಂಜಿನಿಯರ್ ಗಳಿಗೆ ಸಂಬಂಧಿಸಿದ ಅಧೀಕ್ಷಕ ಇಂಜಿನಿಯರ್ ಗಳ ಮುಖಾಂತರ

ಪ್ರತಿ:-

1. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿಯವರ (ಸಂಪರ್ಕ & ಕಟ್ಟಡ), ಆಪ್ತ ಸಹಾಯಕರು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.